


ಗುಂಡ ಹಾಗೂ ಅವನ ಹೆಂಡತಿ ಸಿನಿಮಾ ನೋಡಲು ಹೋದರು. ಆದರೆ ಥಿಯೇಟರ್‌ನಲ್ಲಿ ಪುಟ್ಟ ಮಗುವನ್ನು ಕರೆದೊಯ್ಯಲು ಅವಕಾಶ ಇರಲಿಲ್ಲ.

ಗುಂಡ ಉಪಾಯ ಮಾಡಿ ಬೆತ್ತದ ಸಣ್ಣ ಬಾಸ್ಕೆಟ್‌ನಲ್ಲಿ ಮಗುವನ್ನು ಮಲಗಿಸಿ ಹಾಗೆಯೇ ಕೈಯಲ್ಲಿ ಹಿಡಿದುಕೊಂಡು ಹೋದ.

ಗೇಟ್‌ಕೀಪರ್: ಬುಟ್ಟಿಯಲ್ಲಿ ಏನಿದೆ?

ಗುಂಡ: ಅದರಲ್ಲಿ ನಮ್ಮ ಲಂಚ್ ಇದೆ.

ಗೇಟ್‌ಕೀಪರ್: ಸರಿ ಸರಿ.. ಜಾಗ್ರತೆಯಾಗಿ ತೆಗೆದುಕೊಂಡು ಹೋಗಿ. ಬುಟ್ಟಿಯಿಂದ ಸಾಂಬಾರ್ ಸೋರುತ್ತಿದೆ!

★★★

ಇಡೀ ಬೆಂಗಳೂರಿನಲ್ಲಿ ಅತ್ಯಂತ ದಪ್ಪವಾಗಿರುವ ಹುಡುಗಿಗೆ ಏನಂತ ಕರೀತಾರೆ?

ಬೃಹತ್ ಬೆಂಗಳೂರು ಮಹಾನಗರ ಬಾಲಿಕೆ!

★★★

ತಿಪ್ಪೇಶಿ: ಒಬ್ಬ ವ್ಯಕ್ತಿ ಕಷ್ಟದಲ್ಲಿದ್ದಾಗ ಆತನ ಕುಟುಂಬದ ಸದಸ್ಯರು ಮತ್ತು ಗೆಳೆಯರು ಆತನ ಬೆನ್ನ ಹಿಂದೆ ನಿಂತಿರುತ್ತಾರೆ.

ಗೆಳೆಯ: ಅಷ್ಟು ಖಚಿತವಾಗಿ ಹೇಗೆ ಹೇಳುತ್ತೀಯಾ?

ತಿಪ್ಪೇಶಿ: ನಂಬಿಕೆಯಾಗದಿದ್ದರೆ ನಿನ್ನ ಮದುವೆ ಫೋಟೊ ನೋಡು. ನಿನ್ನ ಮತ್ತು ನಿನ್ನ ಹೆಂಡತಿಯ ಹಿಂದೆ ಎಲ್ಲ ಅವರೇ ನಿಂತಿದ್ದಾರೆ.

★★★



ಮನೆಯಲ್ಲಿ ಗಂಡ ಹೆಂಡತಿಗೆ ಜಗಳವಾಯಿತು.

ಗಂಡ ಸಿಟ್ಟಿಗೆದ್ದು ನೇಣು ಹಾಕಿಕೊಳ್ಳಲು ಸ್ಟೂಲಿನ ಮೇಲೆ ನಿಂತು ಸೀಲಿಂಗ್ ಫ್ಯಾನಿಗೆ ಹಗ್ಗ ಬಿಗಿಯತೊಡಗಿದ.

ಐದು ನಿಮಿಷವಾಯಿತು...

ಹೆಂಡತಿ ತಣ್ಣಗೆ ಹೇಳಿದಳು: 'ನೀವು ಏನು ನಿರ್ಧಾರ ಕೈಗೊಳ್ಳುತ್ತೀರೋ ಬೇಗ ಕೈಗೊಳ್ಳಿ. ನನಗೆ ಸ್ಟೂಲ್‌ನ ಅವಶ್ಯಕತೆ ಇದೆ..'

★★★

ಕ್ಷೌರಿಕ: ಸ್ವಾಮಿ, ಕೂದಲನ್ನು ಎಷ್ಟು ಚಿಕ್ಕದಾಗಿ ಕತ್ತರಿಸಲಿ?

ಗಿರಾಕಿ: ನನ್ನ ಹೆಂಡತಿಯ ಹಿಡಿತಕ್ಕೆ ಸಿಕ್ಕಬಾರದು ನೋಡಪ್ಪಾ.. ಅಷ್ಟು ಚಿಕ್ಕದಾಗಿ ಕತ್ತರಿಸು!

(ಸಂಗ್ರಹ) ಮುರಲೀಧರ ಕುಲಕರ್ಣಿ




Invisible Hearing Aids.

Designed just for you.



FREE HEARING TEST & CONSULTATION WEEK

- World's MOST POWERFUL Custom Hearing Aids
- World's Only INVISIBLE-IN THE CANAL Hearing Aid
- Special CONCESSION on all Hearing Aids
- Special EXCHANGE OFFERS on all Hearing Aids

Camp at Hubli

*Call for details*

Be free from Hearing Problems.

SOUNDFUL 15 YEARS
SINCE 1994
RAJAN SPEECH & HEARING
Listen to life

"Schedule an Appointment Now"

Call Toll-Free: 1800 103 0340

( Please call between 9.30 am & 6.30 pm )

Ph: 41510404, 65467791

email: info@rshc.in, www.rshc.in

Clinic open on Sundays also-by appointment only.

IT'S NEW AND 100% INVISIBLE

Finally there's a hearing aid that is literally out of sight and off your mind !

artude

*Clinics in Bangalore:* Residency Road | Koramangala | Indiranagar | Malleshwaram